ಎಚ್.ಎಂ. ಅನಂತಪದ್ಮನಾಭ, ಮೈಸೂರು
ಚದುರಂಗದ ಪಟ್ಟುಗಳನ್ನು ಅರಿತವಳು ಸಂಸಾರದಲ್ಲಿ ಯಶಸ್ವಿ ಆಗುವಳೇ?



ಚದುರಂಗದಲ್ಲಿ ರಾಣಿಗೆ ಇರುವಷ್ಟೇ ಸ್ವಾತಂತ್ರ್ಯ, ರಕ್ಷಣೆ ಇದ್ದರೆ ಖಂಡಿತ ಆಗುವಳು.

ಹೆಚ್.ವಿ. ಶ್ರೀಧರ್, ಬೆಂಗಳೂರು
'ಪ್ರಶ್ನಿಸದೆ ಏನನ್ನೂ ಒಪ್ಪಬೇಡಿ' ಎಂದರು ಡಾ. ಎಚ್ಚೆನ್. ನಾವು ಪ್ರಶ್ನಿಸಿದರೆ ನೀವು ಉತ್ತರಿಸುತ್ತಿಲ್ಲವಲ್ಲ?
'ಯೋಚಿಸದೆ ಉತ್ತರಿಸಬೇಡಿ' ಎಂದು ನನಗೆ ಹೇಳಿದ್ದರು. ಆದ್ದರಿಂದ ವಿಳಂಬ.

ರಮಾ ಗೋವಿಂದರಾಜು, ಬೆಂಗಳೂರು
ಟೀವಿ ಧಾರಾವಾಹಿಗಳೇಕೆ ವಾಸ್ತವಿಕ ಅಂಶಗಳನ್ನು ಬಿಂಬಿಸುತ್ತಿಲ್ಲ?
ಬುರುಡೆಗೆ ಇರುವ ಆಕರ್ಷಣೆ ಸತ್ಯಕ್ಕೆ ಇಲ್ಲವಲ್ಲ!

ಬೂಕನಕೆರೆ ವಿಜೇಂದ್ರ, ಮೈಸೂರು
ದೇವರಿಗೇಕೆ ಬಡವರ ಮೇಲೆಯೇ ಹೆಚ್ಚು ಕೋಪ?



ತನ್ನಂತೆ ನಿಸರ್ಗದ ಮಧ್ಯೆ ನೆಮ್ಮದಿಯಿಂದ ಜೀವಿಸದೆ ಸಿಟಿ ಸೇರಲು ಸಾಯುವರೆಂದು.

ಪಿ.ಜೆ. ರಾಘವೇಂದ್ರ, ಮೈಸೂರು
ಕೃತಕ ಬುದ್ಧಿಮತ್ತೆಯಿಂದ ಸಹಜ ಬುದ್ಧಿ ಮಂಕಾಗುತ್ತಿದೆಯೆ?
ಊಹೂಂ. ಕೃತಕಕ್ಕೆ ಫೀಡ್ ಮಾಡಲು ಮತ್ತಷ್ಟು ಚುರುಕಾಗುತ್ತಿದೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಮತ್ತೊಬ್ಬರನ್ನು ಸಂಶಯದಿಂದ ನೋಡುವ ಮಂದಿ ತಾವು ಸತ್ಯ ಹರಿಶ್ಚಂದ್ರರ ವಂಶಸ್ಥರಂತೆ ಬೀಗುವರಲ್ಲ?
ಸತ್ಯಹರಿಶ್ಚಂದ್ರ ಕೊಂಚ ಕಾಲ ಇದ್ದ ಸ್ಥಳದ ವಂಶಸ್ಥರಂತೆ; ತತ್ಕಾರಣ ಸುಡುಗಾಡು ಬುದ್ಧಿ!

ಮಲ್ಲಿಕಾರ್ಜುನ, ಸುರಧೇನುಪುರ
ಬೆಳ್ಳಗಿರುವುದೆಲ್ಲ ಹಾಲಲ್ಲ; ಯೂಟ್ಯೂಬಲ್ಲಿ ಬರೋದೆಲ್ಲ?
ಯೂಸೂ ಇಲ್ಲ, ಟ್ರೂತೂ ಅಲ್ಲ.

ತಿಮ್ಮರಾಜು, ದಾವಣಗೆರೆ
ಎಲ್ಲರೂ 'ನನ್ನ ಮೇಲೆ ಗೂಬೆ ಕೂರಿಸಬೇಡ' ಎನ್ನುತ್ತಾರೆ. ಹಾಗೆಂದರೇನು?
'ಗೂ–ಗೂಹನ, ಬೆ–ಬೆದರಿಕೆ, ಇವುಗಳು ನನ್ನಿಂದ ನಡೆದಿಲ್ಲ' ಎಂದು.

ವಾಸಣ್ಣ, ಧಾರವಾಡ
ಎಡ–ಬಲಗಳ ಹೋರಾಟದಲ್ಲಿ ಕನ್ನಡದ 'ನಡು'ವನ್ನೇ ಮುರಿದು ಹಾಕುತ್ತಿರುವರಲ್ಲ?
ಸಾಹಿತ್ಯಿಕ ಬೆನ್ನು ಭದ್ರವಿದೆಯಲ್ಲ! ಹುರಿ ಗಟ್ಟಿಯಿರುವ ತನಕ ನಡು ಹುರಿಯಾಳೇ.

ಬಿದರಹಳ್ಳಿ ವಿಜಯ, ಹಿರೇಹಡಗಲಿ
ಒಂದೊಂದು ಸಲ ಸತ್ಯ ಸಾಯಿಸುತ್ತೆ, ಸುಳ್ಳು ಉಳಿಸುತ್ತೆ. ನಿಜವೆ?
ಕೋರ್ಟ್ ಕೇಸುಗಳ ಮಟ್ಟಿಗಂತೂ ಸಂಪೂರ್ಣ ಸತ್ಯ.

ಅಜ್ಜಯ್ಯಮೂರ್ತಿ, ಹುಬ್ಬಳ್ಳಿ
ಅಧಿಕಾರಿಗಳ ಕೋಟಿಗಟ್ಟಲೆ ಅಕ್ರಮ ಆಸ್ತಿ ಪತ್ತೆ; ಸಜೆ ನಾಪತ್ತೆ. ಏಕೀ ಅವ್ಯವಸ್ಥೆ?
ಅಕ್ರಮ ನಾಪತ್ತೆಯಾಗಲು ಕಾನೂನು, ಆಡಳಿತದಲ್ಲಿ ವ್ಯವಸ್ಥೆ ಇರುವುದರಿಂದ.

ಜಗದೀಶ ಬಿ. ಹೊಸೂರು, ಮೈಸೂರು
ಸಮುದ್ರದಲ್ಲಿ ಮಿಂದೇಳುವ ಜನರು ಮಳೆಗೆ ಹೆದರಿ ಆಶ್ರಯ ಹುಡುಕುವುದೇಕೆ?
ಬೇಕೆನಿಸಿದ್ದು ಆಟ, ಬೇಡವಾದ್ದು ಕಾಟವಾದ್ದರಿಂದ.

ಭಾರತೀ ಗಂಗಾಧರ್, ಬೆಂಗಳೂರು
ನಾಲಿಗೆಯ ಮೇಲೆ ಮಚ್ಚೆ ಇರುವವರ ಮಾತು ಸತ್ಯ ಆಗುತ್ತದೆ ಎನ್ನುವರಲ್ಲಾ, ಇದು ನಿಜವೆ?
ಅದಕ್ಕಿಂತ ಕೈಯಲ್ಲಿ ಮಚ್ಚು ಹಿಡಿದವರ ಮಾತು ಅನುಸರಿಸಿ ನಿಜವಾಗುತ್ತದೆ.


## ಬಹುಮಾನಿತ ಪ್ರಶ್ನೆ

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು
ಲಂಚ ಪಡೆಯುವುದರ ಬಗ್ಗೆ ಉಚಿತ ತರಬೇತಿ ನಡೆಸುವವರಿದ್ದರೆ ಸರ್ಕಾರ ಅನುದಾನ ನೀಡಬಹುದೆ?
ಶೇ. 40 ಕೊಟ್ಟರೆ ಮಾತ್ರ ಎಂದಿತಂತೆ.

ಎನ್. ವೈದೇಹಿ, ಮೈಸೂರು
ನಿಜವಾಗಿಯೂ ದೇವರು ಇದ್ದಾನಾ?
ಅದೊಂದು ಅಪನಂಬಿಕೆ ಎದ್ದ ತಕ್ಷಣ ಮಾಯವಾಗುವ ಭರವಸೆ.

ಕುಣಿಗಲ್ ಜಯಣ್ಣ, ಪಾಂಡವಪುರ
ನಂಬಿಕೆ ದ್ರೋಹ ಈಗ ಜಾಸ್ತಿ ಆಗಿದೆಯಲ್ಲ, ಇದಕ್ಕೆ ಕಡಿವಾಣ?
ಅನುಮಾನ, ವಿವೇಕ ಹೆಚ್ಚಿಸಿಕೊಳ್ಳಿ.

ಶಿವಮೊಗ್ಗ ರಮೇಶ್, ಮೈಸೂರು
ರಾಜಕೀಯ ಕಳ್ಳನಿಗೂ, ಸಾಮಾನ್ಯ ಕಳ್ಳನಿಗೂ ವ್ಯತ್ಯಾಸವೇನು?



ಸಾಮಾನ್ಯ ಕಳ್ಳನಿಗೆ ಜೈಲ್; ರಾಜಕೀಯ ಕಳ್ಳನಿಗೆ ಜೈ!

ಚಂದ್ರಕುಮಾರ್, ಬೆಂಗಳೂರು
ಈಗಿನ ಮಕ್ಕಳು ಮೀನಿಗೆ ಈಜು ಕಲಿಸುವರಲ್ಲ?
ತಿಳಿಯಿತು! ನೀವು ಹೇಳುತ್ತಿರುವುದು ಅಕ್ವೇರಿಯಂ ಗೇಮ್ ಬಗ್ಗೆ!

ಆಶಾ ಅಪ್ರಮೇಯ, ದಾವಣಗೆರೆ
ಮೃತರಾದವರೆಲ್ಲರೂ ಸ್ವರ್ಗಸ್ಥರಾಗಲು ಹೇಗೆ ಸಾಧ್ಯ? ನರಕಸ್ಥರೂ ಆಗಬಹುದಲ್ಲವೆ?
ಆಗಬಹುದು. ಆದರೆ ಹಾಗೆ ಬರೆದವರಿಗೆ ನರಕ ತೋರಿಸುವ ಸಾಧ್ಯತೆ ಇರುವುದರಿಂದ

ಕೆ.ಎಂ. ಕೊಟ್ರಸ್ವಾಮಿ, ಸಂಡೂರು
ಪ್ರಸ್ತುತ ರಾಜಕಾರಣ ಮಹಾಭಾರತದ ರಾಜಕಾರಣವನ್ನು ಮೀರಿಸುವಂತಿದೆಯಲ್ಲಾ?
ಕೃಷ್ಣ ನಾಪತ್ತೆ, ಶಕುನಿಗಳು ಅನೇಕರು ಇರುವಾಗ ಇದು ಸಹಜವೇ.

■ ರಾಮ್